Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ 56/2020

ಪ್ರಾ.ಸಾ. 1 ಚಾ.ಸಾ. 1

| | | |
|---|---|---|
| ಹೆಸರು | : | ಸುರೇಶಬಾಬು |
| ತಂದೆಯ ಹೆಸರು | : | ರುದ್ರಪ್ಪ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಪೊಲೀಸ ಇನ್ಸಪೇಕ್ಟರ ಕರ್ನಾಟಕ ಲೋಕಾಯುಕ್ತ ಕಛೇರಿ ಹೊಸಪೇಟೆ |
| ವಾಸ | : | ಹೊಸಪೇಟೆ |

**ವಿ.ಸಿ.ಯ ಮೂಲಕ ಪ್ರಮಾಣ ವಚನ ಭೋಧಿಸಿದ ದಿನಾಂಕಃ 11-03-2024**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು ದಿಃ 11-10-2018 ರಿಂದ 29-11-2019 ರ ವರೆಗೆ ಗೋಗಿ ಪೊಲೀಸಠಾಣೆಯಲ್ಲಿ ಪಿಎಸಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 21-01-2019 ರಂದು ನಾನು ಮಧ್ಯಾಹ್ನ 3-00 ಗಂಟೆಗೆ ಠಾಣಾ ಪ್ರಭಾದಲ್ಲಿದ್ದಾಗ ಹಾರಣಗೇರಾ ಸೀಮಾಂತರದ ತಾಂಡಾ ದಾಟಿದ ನಂತರ ಹಳ್ಳದ ಪಕ್ಕದ ಹೊಲ ಸರ್ವೆ ನಂ. 99, 3 ಎಕರೆ 36 ಗುಂಟೆ ಜಮೀನಲ್ಲಿ ಒಬ್ಬ ವ್ಯಕ್ತಿ ಅನಧಿಕೃತವಾಗಿ ಗಾಂಜಾವನ್ನು ಮಾರಾಟ ಮಾಡಲು ಬೆಳೆದು ಬೆಳೆ ಕಿಳಲು ಹೋಗಿದ್ದಾನೆ ಎಂದು ಮಾಹಿತಿ ಬಂತು. ಶರಣಪ್ಪ ಎಂಬ ಸರಕಾರಿ ಕನ್ಯಾ ಪ್ರಾಥಮಿಕ ಶಾಲೆ ಗೋಗಿ ಮತ್ತು ಅದೇ ಶಾಲೆಯ ಎಮ್.ಡಿ. ಮೋಶಿನ ಖಾನ ಶಿಕ್ಷಕರು ಅವರನ್ನು ಮತ್ತು ಪತ್ರಾಂಕಿತ ಅಧಿಕಾರಿ ಡಾಃ ಸಂಜೆಯ ವನದುರ್ಗಾ ವೈದ್ಯಾಧಿಕಾರಿಗಳು ಇವರನ್ನು ಕರೆಯಿಸಿಕೊಂಡು, ತೂಕಮಾಡಲು ಲವಕುಮಾರ ಸಾಃ ಗೋಗಿ ಈತನನ್ನು ಕರೆಯಿಸಿಕೊಂಡು ಅವರಿಗೆ ಪೊಲೀಸ ನೊಟೀಸನ್ನು ಕೊಟ್ಟು ಒಪ್ಪಿಗೆ ಪತ್ರವನ್ನು ಬರೆಯಿಸಿಕೊಂಡೆನು. ಸದರಿ ನೊಟೀಸಗಳನ್ನು ನೋಡುತ್ತಿದ್ದು ಅವುಗಳನ್ನು ನಿ.ಪಿ.1 ಮತ್ತು 2 ಎಂದು ಸಾಕ್ಷಿಯ ಸಹಿಗಳನ್ನು ನಿ.ಪಿ.1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ನಂತರ ಸಿಬ್ಬಂದಿಗಳಾದ ಸೋಮಲಿಂಗಪ್ಪ, ಮಲ್ಲಿಕಾರ್ಜುನ ಬಂಡಿ, ಪ್ರೇಮಸಿಂಗ, ವಿರೇಂದ್ರ, ಮಾಳಪ್ಪ ಮತ್ತು ಲ್ಯಾಪಟಾಪ ಅಪರೇಟರ ಶರಣಗೌಡ ಅವರನ್ನು ಕರೆಯಿಸಿ ಬಾತ್ಮಿ ಬಗ್ಗೆ ತಿಳಿಯಿಸಿ ದಾಳಿ ಮಾಡಲು ಹೋಗಬೇಕಿದೆ ಎಂದು ತಿಳಿಸಿದೆ. ಪಂಚರು

ಈ ಬಗ್ಗೆ ಒಪ್ಪಿಗೆ ಕೊಟ್ಟರು. ಆ ಒಪ್ಪಿಗೆ ಪತ್ರಗಳನ್ನು ನೋಡುತ್ತಿದ್ದು ಅವುಗಳನ್ನು ನಿ.ಪಿ.3 ಮತ್ತು 4 ಎಂದು ಸಾಕ್ಷಿಯ ಸಹಿಗಳನ್ನು ನಿ.ಪಿ.3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು. ಮಧ್ಯಾಹ್ನ 3-30 ಗಂಟೆಗೆ ನಮ್ಮ ಇಲಾಖಾ ಜೀಪ ಮತ್ತು ಮೋಟರ ಸೈಕಲಗಳಲ್ಲಿ ಎಲ್ಲರೂ ಠಾಣೆಯಿಂದ ಹೊರಟು, 4-30 ಗಂಟೆಗೆ ಆ ಜಾಗಕ್ಕೆ ತಲುಪಿದೇವು. ದೂರದಲ್ಲಿ ನಿಂತು ಗಮನಿಸಿದಾಗ ಸಂಜೆ 4-45 ಗಂಟೆಗೆ ಒಬ್ಬ ವ್ಯಕ್ತಿ ಬೆಳೆ ಕಿತ್ತಿದ್ದನ್ನು ನೋಡಿ ನಾವುಗಳು ಹೋಗಿ ಆತನನ್ನು ಹಿಡಿದುಕೊಂಡೆವು. ಆತನ ಹೆಸರನ್ನು ವಿಚಾರಿಸಿದಾಗ ಮಲ್ಲಿಕಾರ್ಜುನ ಬೇವಿನಕಟ್ಟಿ ಸಾಃ ಹಾರಣಗೇರಾ ಎಂದು ತಿಳಿಸಿದನು. ಗಾಂಜಾ ಗಿಡಗಳು ಅಲ್ಲಿ ಇದ್ದು ಅವುಗಳನ್ನು ನೋಡಿ ಗಾಂಜಾ ಬೆಳೆಯಲು ಅನುಮತಿ ಪಡೆದಿದ್ದಿಯಾ ಎಂದು ಕೇಳಲಾಗಿ ಆತ ಇಲ್ಲ ಎಂದು ಹೇಳಿದ. ನಂತರ ಕಿತ್ತಿ ಇಟ್ಟಿದ್ದ ಗಿಡಗಳನ್ನು ಲವಕುಮಾರ ಅವರಿಂದ ತೂಕ ಮಾಡಿಸಿದೆ. 2 ಕೆ.ಜಿ. 590 ಗ್ರಾಮ್ ತೂಕ್ ಇದ್ದು ಅದರ ಬೆಲೆ 600/- ರೂಪಾಯಿ ಎಂದು ನಿಗದಿಪಡಿಸಿದೆವು. ಆ ಪೈಕಿ 195 ಗ್ರಾಮ್ ಹಸಿ ಗಿಡವನ್ನು ರಾಸಾಯನಿಕ ಪರೀಕ್ಷೆಗೆ ಪ್ರತ್ಯೇಕವಾಗಿ ತೆಗೆದು ಅದನ್ನು ಸೀಲ್ ಮಾಡಿ ಉಳಿದದ್ದನ್ನು ಸೀಲ್ ಮಾಡಿ ಜಿ.ಪಿ.ಎಸ್. ಎಂದು ಮುದ್ರೆ ಹಾಕಿದೆವು. ಸಂಜೆ 4-45 ರಿಂದ 5-45 ಗಂಟೆಯವರೆಗೆ ಪಂಚನಾಮೆ ಮಾಡಿದ್ದು ಪಂಚನಾಮೆಯನ್ನು ನಿ.ಪಿ.5 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 5 ಭಾವಚಿತ್ರಗಳನ್ನು ತೋರಿಸುತ್ತಿದ್ದು ಅದರಲ್ಲಿ ನಾನು ಕಾಣುತ್ತಿದ್ದು ಸದರಿ ಭಾವಚಿತ್ರಗಳನ್ನು ನಿ.ಪಿ.6 ಮತ್ತು 10 ಎಂದು ಗುರುತಿಸಲಾಯಿತು. ನಂತರ 6-15 ಗಂಟೆಗೆ ಆರೋಪಿ ಮತ್ತು ಮುದ್ದೆ ಮಾಲಿನೊಂದಿಗೆ ಕಛೇರಿಗೆ ವಾಪಾಸ ಆದೇವು. ನಂತರ ಎಎಸಐ ಶರಣಪ್ಪ ಅವರಿಗೆ ವರದಿಯನ್ನು, ಜಪ್ತಿ ಪಂಚನಾಮೆ ಮತ್ತು ಆರೋಪಿ ಮತ್ತು ಮುದ್ದೆ ಮಾಲಿನೊಂದಿಗೆ ವಶಕ್ಕೆ ಕೊಟ್ಟಿರುತ್ತೇನೆ. ಸದರಿ ವರದಿಯನ್ನು ನಿ.ಪಿ.11 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸೀಲ್ ಮಾಡಿದ ಗಾಂಜಾವನ್ನು ನ್ಯಾಯಾಲಯದ ಅನುಮತಿಯ ಮೇರೆಗೆ ಓಪನಮಾಡಲಾಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಗಾಂಜಾವನ್ನು ಮು.ಮಾ.1 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿಯ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ</u>

3. ಈ ಪ್ರಕರಣದ ಮಾಹಿತಿ ಬಂದ ನಂತರ ಕಲಂ.42 ಎನ್.ಡಿ.ಪಿ.ಎಸ್. ಕಾಯ್ದೆ ಪ್ರಕಾರ ಕ್ರಮ ಕೈಕೊಂಡಿರುತ್ತೇನೆ. ಅದರ ಪ್ರತಿಯನ್ನು ತನಿಖಾಧಿಕಾರಿಗೆ ಕೊಟ್ಟಿದ್ದೇನೆ. ಆ ಜಮೀನನ್ನು ಯಾರು ಗುರುತಿಸಿದರು ಎಂದು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಹತ್ತಿ ಬೆಳೆಗಳು ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಇತ್ತು ಎಂದು ನಾನು ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಸರಿ. ಹತ್ತಿ ಬೆಳೆ ಯಾವ ಭಾಗದಲ್ಲಿ ಬೆಳೆದಿತ್ತು ಎಂದು ನಾನು ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಸರಿ. ಅದೇ ರೀತಿ ನಾನು ಗಾಂಜಾ ಗಿಡದ ಯಾವ ಭಾಗಗಳು ಬೆಳೆದಿದ್ದವು ಎಂದು ನಾನು ನಮೂದು ಮಾಡಿಲ್ಲ. ಪಂಚರಿಬ್ಬರೂ ಹಾರಣಗೇರಾ

ಮತ್ತು ಹಾರಣಗೇರಾ ತಾಂಡಾದವರು ಅಲ್ಲ ಎಂದರೆ ಸರಿ. ನಾನು ಪಂಚನಾಮೆಯಲ್ಲಿ ದಾಳಿಗೆ ಕರೆದುಕೊಂಡು ಹೋದ ಸಿಬ್ಬಂದಿಗಳ ಮತ್ತು ತೂಕ ಮಾಡಲು ಕರೆದುಕೊಂಡು ಹೋದ ವ್ಯಕ್ತಿಯ ಸಹಿ ಪಡೆದಿಲ್ಲ ಎಂದರೆ ಸರಿ. 195 ಗ್ರಾಮ್ ಗಾಂಜಾವನ್ನು ರಾಸಾಯನಿಕ ಪರೀಕ್ಷೆಗೆ ತೆಗೆದಿದ್ದು ಗಾಂಜಾ ಗಿಡದ ಯಾವ ಭಾಗ ತೆಗೆದಿದ್ದೇವೆ ಎಂದು ನಮೂದು ಮಾಡಿಲ್ಲ. ಪಂಚನಾಮೆಯಲ್ಲಿ ಹಾಣಗೇರಾ ಗ್ರಾಮದ ಯಾವ ದಿಕ್ಕಿಗೆ ಜಮೀನು ಇತ್ತು ಎಂದು ನಮೂದು ಮಾಡಿಲ್ಲ. ನಮ್ಮ ಸಿಬ್ಬಂದಿ ಪೈಕಿ ಆರೋಪಿಯನ್ನು ಯಾರು ಹಿಡಿದುಕೊಂಡರು ಎಂದು ಬರೆದಿಲ್ಲ ಎಂದರೆ ಸರಿ. ನಾನು ಬಿ.ಎ. ಪದವಿ ಪಡೆದಿದ್ದೇನೆ. ನಾನು ಗಾಂಜಾ ಗಿಡವನ್ನು ಗುರುತಿಸಲು ಕೃಷಿ ಇಲಾಖೆ ಇಂದ ಯಾವುದೇ ತರಬೇತಿ ಪಡೆದಿಲ್ಲ. ಎಷ್ಟು ಗಿಡಗಳು ಇತ್ತು ಎಂದು ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಸರಿ. ಆ ಜಮೀನಿಗೆ ನೀರು ಬಿಟ್ಟಿತ್ತೋ ಇಲ್ಲವೋ ಎಂದು ಪಂಚನಮೆಯಲ್ಲಿ ಬರೆದಿಲ್ಲ ಎಂದರೆ ಸರಿ. ನಾನು ಆ ಸ್ಥಳಕ್ಕೆ ಹೋಗಿಲ್ಲ ಮತ್ತು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

4. ದಿನಾಂಕಃ 21-01-2019 ರಂದು ನಾನು ಮಧ್ಯಾಹ್ನ 3-00 ಗಂಟೆಗೆ ಠಾಣಾ ಪ್ರಭಾದಲ್ಲಿದ್ದಾಗ ಹಾರಣಗೇರಾ ಸೀಮಾಂತರದ ತಾಂಡಾ ದಾಟಿದ ನಂತರ ಹಳ್ಳದ ಪಕ್ಕದ ಹೊಲ ಸರ್ವೆ ನಂ. 99, 3 ಎಕರೆ 36 ಗುಂಟೆ ಜಮೀನಲ್ಲಿ ಒಬ್ಬ ವ್ಯಕ್ತಿ ಅನಧಿಕೃತವಾಗಿ ಗಾಂಜಾವನ್ನು ಮಾರಾಟ ಮಾಡಲು ಬೆಳೆದು ಬೆಳೆ ಕಿಳಲು ಹೋಗಿದ್ದಾನೆ ಎಂದು ಮಾಹಿತಿ ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶರಣಪ್ಪ ಎಂಬ ಸರಕಾರಿ ಕನ್ಯಾ ಪ್ರಾಥಮಿಕ ಶಾಲೆ ಗೋಗಿ ಮತ್ತು ಅದೇ ಶಾಲೆಯ ಎಮ್.ಡಿ. ಮೋಶಿನ ಖಾನ ಶಿಕ್ಷಕರು ಅವರನ್ನು ಮತ್ತು ಪತ್ರಾಂಕಿತ ಅಧಿಕಾರಿ ಡಾಃ ಸಂಜೆಯ ವನದುರ್ಗಾ ವೈದ್ಯಾಧಿಕಾರಿಗಳು ಇವರನ್ನು ಕರೆಯಿಸಿಕೊಂಡು, ತೂಕಮಾಡಲು ಲವಕುಮಾರ ಸಾಃ ಗೋಗಿ ಈತನನ್ನು ಕರೆಯಿಸಿಕೊಂಡು ಅವರಿಗೆ ಪೊಲೀಸ ನೊಟೀಸನ್ನು ಕೊಟ್ಟು ಒಪ್ಪಿಗೆ ಪತ್ರವನ್ನು ಬರೆಯಿಸಿಕೊಂಡೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸಿಬ್ಬಂದಿಗಳಾದ ಸೋಮಲಿಂಗಪ್ಪ, ಮಲ್ಲಿಕಾರ್ಜುನ ಬಂಡಿ, ಪ್ರೇಮಸಿಂಗ, ವಿರೇಂದ್ರ, ಮಾಳಪ್ಪ ಮತ್ತು ಲ್ಯಾಪಟಾಪ ಅಪರೇಟರ ಶರಣಗೌಡ ಅವರನ್ನು ಕರೆಯಿಸಿ ಬಾತ್ಮಿ ಬಗ್ಗೆ ತಿಳಿಯಿಸಿ ದಾಳಿ ಮಾಡಲು ಹೋಗಬೇಕಿದೆ ಎಂದು ತಿಳಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರು ಈ ಬಗ್ಗೆ ಒಪ್ಪಿಗೆ ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಧ್ಯಾಹ್ನ 3-30 ಗಂಟೆಗೆ ನಮ್ಮ ಇಲಾಖಾ ಜೀಪ ಮತ್ತು ಮೋಟರ ಸೈಕಲಗಳಲ್ಲಿ ಎಲ್ಲರೂ ಠಾಣೆಯಿಂದ ಹೊರಟು, 4-30 ಗಂಟೆಗೆ ಆ ಜಾಗಕ್ಕೆ ತಲುಪಿದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರದಲ್ಲಿ ನಿಂತು ಗಮನಿಸಿದಾಗ ಸಂಜೆ 4-45 ಗಂಟೆಗೆ ಒಬ್ಬ ವ್ಯಕ್ತಿ ಬೆಳೆ ಕಿತ್ತಿದ್ದನ್ನು ನೋಡಿ ನಾವುಗಳು ಹೋಗಿ ಆತನನ್ನು ಹಿಡಿದುಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತನ ಹೆಸರನ್ನು ವಿಚಾರಿಸಿದಾಗ ಮಲ್ಲಿಕಾರ್ಜುನ ಬೇವಿನಕಟ್ಟಿ ಸಾಃ ಹಾರಣಗೇರಾ ಎಂದು ತಿಳಿಸಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಗಾಂಜಾ ಗಿಡಗಳು ಅಲ್ಲಿ ಇದ್ದು ಅವುಗಳನ್ನು ನೋಡಿ ಗಾಂಜಾ ಬೆಳೆಯಲು ಅನುಮತಿ ಪಡೆದಿದ್ದಿಯಾ ಎಂದು ಕೇಳಲಾಗಿ ಆತ ಇಲ್ಲ ಎಂದು ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಕಿತ್ತಿ ಇಟ್ಟಿದ್ದ ಗಿಡಗಳನ್ನು ಲವಕುಮಾರ ಅವರಿಂದ ತೂಕ ಮಾಡಿಸಿದೆ. 2 ಕೆ.ಜಿ. 590 ಗ್ರಾಮ್ ತೂಕ್ ಇದ್ದು ಅದರ ಬೆಲೆ 600/- ರೂಪಾಯಿ ಎಂದು ನಿಗದಿಪಡಿಸಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪೈಕಿ 195 ಗ್ರಾಮ್ ಹಸಿ ಗಿಡವನ್ನು ರಾಸಾಯನಿಕ ಪರೀಕ್ಷೆಗೆ ಪ್ರತ್ಯೇಕವಾಗಿ ತೆಗೆದು ಅದನ್ನು ಸೀಲ್ ಮಾಡಿ ಉಳಿದದ್ದನ್ನು ಸೀಲ್ ಮಾಡಿ ಜಿ.ಪಿ.ಎಸ್. ಎಂದು ಮುದ್ರೆ ಹಾಕಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಜೆ 4-45 ರಿಂದ 5-45 ಗಂಟೆಯವರೆಗೆ ಪಂಚನಾಮೆ ಮಾಡಿದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಫೋಟೊಗಳನ್ನು ತೆಗೆದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ 6-15 ಗಂಟೆಗೆ ಆರೋಪಿ ಮತ್ತು ಮುದ್ದೆ ಮಾಲಿನೊಂದಿಗೆ ಕಛೇರಿಗೆ ವಾಪಾಸ ಆದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಎಎಸಐ ಶರಣಪ್ಪ ಅವರಿಗೆ ವರದಿಯನ್ನು, ಜಪ್ತಿ ಪಂಚನಾಮೆ ಮತ್ತು ಆರೋಪಿ ಮತ್ತು ಮುದ್ದೆ ಮಾಲಿನೊಂದಿಗೆ ವಶಕ್ಕೆ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.